# ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ. ಎಂ.ಎಫ್.ಸಿ ರವರ ನ್ಯಾಯಾಲಲಯ, ಕೆ. ಆರ್ ನಗರ

**ಸಿ. ಸಿ.ಸಂಖ್ಯೆ: 548/2017**

ಪಿರ್ಯಾದಿ : ಶ್ರೀ ವೇಣುಗೋಪಾಲ ಡಿ

:- ವಿರುದ್ಧ :-

ಆರೋಪಿ : ಶ್ರೀ ಕುಮಾರ

## ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರಡಿ ಆಪಾದಿತನ ಹೇಳಿಕೆ

1. ಪಿರ್ಯಾದಿ ಪರ ಸಾಕ್ಷ್ಯವನ್ನು ಕೇಳಿದ್ದೀರಾ?

ಉತ್ತರ: ಹೌದು,

2. ಪ್ರಾಸಾ 1 ವೇಣುಗೋಪಾಲರವರು ತಮ್ಮ ಸಾಕ್ಷ್ಯದಲ್ಲಿ ಆರೋಪಿಯಾದ ನೀವು ಅವರಿಂದ ದಿನಾಂಕ: 10.04.2014 ರಂದು ರೂ.3,00,000/- ಗಳನ್ನು ಸಾಲವಾಗಿ ಪಡೆದುಕೊಂಡಿರುತ್ತೀರಿ ಎಂದು ಹೇಳುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರ: ಸುಳ್ಳು

3. ಪ್ರಾಸಾ 1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಸದರಿ ಸಾಲದ ಹಣದ ಮರುಪಾವತಿಗಾಗಿ ಆರೋಪಿಯಾದ ನೀವು ಅದೇ ದಿನ ದಿ ಓರಿಯಂಟಲ್ ಬ್ಯಾಂಕ್ ಆಪ್ ಕಾಮರ್ಸ್, ಗೋಕುಲಂ ಮುಖ್ಯ ರಸ್ತೆ, ಜಯಲಕ್ಷ್ಮಿಪುರಂಶಾಖೆ, ಮೈಸೂರು ಇಲ್ಲಿಗೆ ಸೇರಿದ ಚೆಕ್ ಸಂಖ್ಯೆ: 132432 ಕ್ಕೆ 20.06.2014 ರ ದಿನಾಂಕವನ್ನು ಹಾಗೂ ರೂ.3,00,000/- ವನ್ನು ನಮೂದಿಸಿ ಸದರಿ ಚೆಕ್ಕಿಗೆ ಸಹಿ ಮಾಡಿ ಅವರಿಗೆ ನೀಡಿರುತ್ತೀರಿ ಎಂದು ನುಡಿದಿದ್ದಾರೆ ಇದಕ್ಕೆ ನೀವೇನು ಹೇಳುತ್ತೀರಾ?

ಉತ್ತರ: ಸುಳ್ಳು

4. ಪ್ರಾಸಾ 1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಅವರು ನೀವು ಕೊಟ್ಟಂತಹ ಚೆಕ್ಕನ್ನು ತಮ್ಮ ಖಾತೆ ಹೊಂದಿರುವ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯ, ಕೆ ಆರ್ ನಗರ ಶಾಖೆಯ ಮುಖಾಂತರ ದಿನಾಂಕ: 14.07.2014 ರಂದು ಹಾಜರುಪಡಿಸಿದಾಗ ಆರೋಪಿಯಾದ ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲ ಎಂಬ ಕಾರಣಕ್ಕೆ ನಿಮ್ಮ ಚೆಕ್ ತಿರಸ್ಕೃತಗೊಂಡು ಹಿಂಬರಹದೊಂದಿಗೆ ದಿ: 19.07.2014 ರಂದು ಅವರಿಗೆ ವಾಪಸ್ಸಾಗಿರುವುದಾಗಿ ನುಡಿದಿದ್ದಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರ: ಸುಳ್ಳು

ಕುಮಾರ

5. ಫ್ರಾಸಾ 1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ನಂತರ ಅವರು ಎಲ್ಲಾ ವಿಷಯವನ್ನು ತಿಳಿಸಿ ಹಣಕ್ಕೆ ತಗಾದೆ ಮಾಡಿ ಆರೋಪಿಯಾದ ನಿಮಗೆ ವಕೀಲರ ಮೂಲಕ ದಿಃ 01.08.2014 ರಂದು ನೋಟೀಸನ್ನು ಅಚೆ ಮೂಲಕ ಕೊಡಿಸಿ ಚೆಕ್ ಬಾಬ್ತು ಹಣವನ್ನು 15 ದಿನಗಳ ಒಳಗಾಗಿ ನಗದಾಗಿ ಪಾವತಿಸುವಂತೆ ತಗಾದೆ ಮಾಡಿದ್ದಾಗಿ ನುಡಿದಿದ್ದಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು.

6. ಫ್ರಾಸಾ 1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಸದರಿ ನೋಟೀಸ್‌ನ್ನು ಆರೋಪಿಯಾದ ನೀವು ಪಡೆದಿದ್ದರೂ ಸಹಾ ಯಾವುದೇ ಹಣವಾಗಲೀ ಅಥವಾ ಸದರಿ ನೋಟೀಸಿಗೆ ಉತ್ತರವಾಗಲೀ ಪಿರ್ಯಾದಿಗೆ ಕೊಡದೆ ಆರೋಪಿಯಾದ ನೀವು ಎನ್.ಐ. ಆಕ್ಟ್ ಕಲಂ 138 ರಡಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುವಿರೆಂದು ನುಡಿದಿದ್ದಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

7. ಫ್ರಾಸಾ 1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಆರೋಪಿಯಾದ ನೀವು ಸಹಿ ಮಾಡಿ ಕೊಟ್ಟ ಚೆಕ್, ಬ್ಯಾಂಕಿನ ಹಿಂಬರಹ, ವಕೀಲರು ನೀಡಿದ ನೋಟೀಸಿನ ಪ್ರತಿ, ಅಂಚೆ ರಶೀತಿಗಳನ್ನು ಹಾಗೂ ಅಂಚೆ ಸ್ವೀಕೃತಿ ಪತ್ರ ಅಲ್ಲದೆ ಅಂಚೆ ಇಲಾಖೆಯವರು ನೀಡಿದ ಹಿಂಬರಹವನ್ನು ಹಾಜರುಪಡಿಸಿರುವುದಾಗಿ ನುಡಿದಿದ್ದಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

8. ನಿಮಗೆ ನ್ಯಾಯಾಲಯದ ಮುಂದೆ ಈ ಕೇಸಿನ ಬಗ್ಗೆ ಏನಾದರೂ ಹೇಳುವುದು ಇದೆಯೇ?

ಉತ್ತರಃ ಇಲ್ಲ

9. ನಿಮ್ಮ ಪರವಾಗಿ ಯಾರಾದರೂ ಸಾಕ್ಷಿಗಳು ಇದ್ದಾರೆಯೇ?

ಉತ್ತರಃ ಇದ್ದಾರೆ

ಆಪಾದಿತರ ಹೇಳಿಕೆಯನ್ನು ನನ್ನ ಸಮಕ್ಷಮದಲ್ಲಿ ಪಡೆಯಲಾಯಿತು. ಆತನುಃ ಆಕೆ ಕೊಟ್ಟ ಉತ್ತರವನ್ನೇ ಸರಿಯಾಗಿ ಬರೆದುಕೊಳ್ಳಲಾಯಿತ್ತೆಂದು ಈ ಮೂಲಕ ದೃಢೀಕರಿಸುತ್ತೇನೆ.

ದಿನಾಂಕಃ ~~27.8.2018~~ 17/9/18

17/9/18.
ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರ.ದ.ನ್ಯಾ ದಂ.,
ಕೃಷ್ಣರಾಜನಗರ.

ಶ್ರೀಲತಾ